ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
ಅಂತರ್ಜಾಲ: www.kptcl.com
ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Corporate Identity Number (CIN): U40109KA1999SGC025521

**(ಕಂಪನಿಯ ಅಧಿಕೃತ ಕಚೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009)**

**ವಿಷಯ:** 2018-19 ನೇ ಹಣಕಾಸು ವರ್ಷಕ್ಕೆ ಬೋನಸ್/ಅನುಗ್ರಹ ಪೂರ್ವಕ ಮಂಜೂರು ಮಾಡುವ ಬಗ್ಗೆ.

*****

**ಓದಲಾಗಿದೆ:**

1. ಕರ್ನಾಟಕ ಸರ್ಕಾರ, ಕವಿಪ್ರನಿನಿ ಹಾಗೂ ಕವಿಪ್ರನಿ ನೌಕರರ ಸಂಘ (ನೋ.ಸಂ.659), ಕವಿಮಂ ಇಂಜಿನಿಯರ್‌ಗಳ ಸಂಘ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ ಹಾಗೂ ಕವಿಮಂ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಕಲ್ಯಾಣ ಸಮಿತಿ ಇವುಗಳ ನಡುವೆ ನಡೆದ ತ್ರಿಪಕ್ಷೀಯ ಒಪ್ಪಂದಗಳು.
2. ದಿನಾಂಕ: 01.04.2014 ರಿಂದ ಅನ್ವಯವಾಗುವಂತೆ ನೌಕರರ ಮಾಸಿಕ ಸಂಬಳ/ಮಜೂರಿಯನ್ನು ₹10,000/- ರಿಂದ ₹21,000/- ಕ್ಕೆ ಹಾಗೂ ಬೋನಸ್ ಗರಿಷ್ಟ ಮೊತ್ತವನ್ನು ₹3,500/- ರಿಂದ ₹7,000/- ಕ್ಕೆ ಹೆಚ್ಚಿಸಿ ಬೋನಸ್ ಆ್ಯಕ್ಟ್, 1965 ಗೆ ತಿದ್ದುಪಡಿಯನ್ನು ಮಾಡಿ ಹೊರಡಿಸಿರುವ ಭಾರತ ಸರ್ಕಾರದ ದಿನಾಂಕ: 01.01.2016 ರ ಆದೇಶ.
3. ದಿನಾಂಕ: 01.04.2014 ರಿಂದ ಅನ್ವಯವಾಗುವಂತೆ ಬೋನಸ್/ಅನುಗ್ರಹಪೂರ್ವಕವನ್ನು ಸಂದಾಯ ಮಾಡುವಾಗ ಲೆಕ್ಕಿಸಲು ನೌಕರರ ಮಾಸಿಕ ಸಂಬಳ/ಮಜೂರಿಯನ್ನು ₹10,000/- ರಿಂದ ₹21,000/- ಕ್ಕೆ ಹಾಗೂ ಬೋನಸ್/ಅನುಗ್ರಹ ಪೂರ್ವಕದ ಗರಿಷ್ಟ ಮೊತ್ತವನ್ನು ₹3,500/- ರಿಂದ ₹7,000/- ಕ್ಕೆ ಹೆಚ್ಚಿಸಿ ಹೊರಡಿಸಿರುವ ನಿಗಮದ ದಿನಾಂಕ: 04.04.2016 ರ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/5608/2000-01.
4. ಗಣೇಶ ಚತುರ್ಥಿ ಹಬ್ಬಕ್ಕೆ ಮುನ್ನ 2018-19 ನೇ ಹಣಕಾಸು ವರ್ಷಕ್ಕೆ ಬೋನಸ್/ಅನುಗ್ರಹ ಪೂರ್ವಕವನ್ನು ಮಂಜೂರು ಮಾಡುವಂತೆ ಕೋರಿ ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ (ನೋಂದಣಿ ಸಂಖ್ಯೆ: 659) ಇವರು ಬರೆದ ದಿನಾಂಕ: 01.08.2019 ರ ಪತ್ರ ಸಂಖ್ಯೆ: ಕವಿಪ್ರನಿನೌಸ/256/19-20.
5. ಗಣೇಶ ಚತುರ್ಥಿ ಹಬ್ಬಕ್ಕೆ ಮುನ್ನ 2018-19 ನೇ ಹಣಕಾಸು ವರ್ಷಕ್ಕೆ ಬೋನಸ್/ಅನುಗ್ರಹ ಪೂರ್ವಕವನ್ನು ಮಂಜೂರು ಮಾಡಲು ಅನುಮೋದನೆಯನ್ನು ಕೋರಿ ದಿನಾಂಕ: 17.08.2019 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು ರವರಿಗೆ ಬರೆದಿರುವ ಪತ್ರ.
6. ನಿಗಮ ಕಾರ್ಯಾಲಯದ ಟಿಪ್ಪಣಿ ದಿನಾಂಕ: 19.08.2019.

**ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/5608/2000-2001, ಬೆಂಗಳೂರು, ದಿನಾಂಕ:** 21 AUG 2019

ನಿಗಮದ/ಎಸ್ಕಾಂಗಳ ನೌಕರರು ಹಾಗೂ 2018-19 ನೇ ಸಾಲಿನಲ್ಲಿ ನಿವೃತ್ತಿಯಾದ ನೌಕರರಿಗೆ, 2018-19ನೇ ಹಣಕಾಸು ವರ್ಷದಲ್ಲಿ ಗಳಿಸಿರುವ ಸಂಬಳ/ಮಜೂರಿಯ (ಪೇಮೆಂಟ್ ಆಫ್ ಬೋನಸ್ ಆಕ್ಟ್, 1965 ರಲ್ಲಿ ವ್ಯಾಖ್ಯಾನಿಸಿರುವಂತೆ) 1/12 ನೇ ಭಾಗ (ಶೇ.8.33) ಅಥವಾ ₹100/-(ರೂಪಾಯಿ ಒಂದು ನೂರು ಮಾತ್ರ) ಇವೆರಡರಲ್ಲಿ ಯಾವುದು ಹೆಚ್ಚೋ, ಅಷ್ಟನ್ನು ಬೋನಸ್ ರೂಪದಲ್ಲಿ ಈ ಕೆಳಗಿನ ಹಾಗೂ ಪೇಮೆಂಟ್ ಆಫ್ ಬೋನಸ್ ಆಕ್ಟ್, 1965 ರಲ್ಲಿ ನಿರ್ದಿಷ್ಟಪಡಿಸಿರುವ ಇತರೆ ಷರತ್ತುಗಳಿಗೊಳಪಟ್ಟು ಸಂದಾಯ ಮಾಡಲು ನಿಗಮವು ಅನುಮೋದಿಸಿದೆ.

1. 2018-19 ನೇ ಹಣಕಾಸು ವರ್ಷಕ್ಕೆ ಸಂದಾಯ ಮಾಡಬೇಕಾಗಿರುವ ಬೋನಸ್, ಮಾಸಿಕ ಸಂಬಳ/ಮಜೂರಿ ₹21,000/- ಮೀರದಂತೆ ಪಡೆಯುತ್ತಿರುವ (ಪೇಮೆಂಟ್ ಆಫ್ ಬೋನಸ್ ಆ್ಯಕ್ಟ್, 1965 (ಪರಿಷ್ಕೃತ) ರಲ್ಲಿ ವ್ಯಾಖ್ಯಾನಿಸಿರುವಂತೆ) ನೌಕರರಿಗೆ ಮಾತ್ರ ಅನ್ವಯಿಸುತ್ತದೆ.
2. ನೌಕರರ ಸಂಬಳ/ಮಜೂರಿ, ಮಾಸಿಕ ₹7,000/- ಮೀರಿದರೆ, ಅಂತಹವರಿಗೆ ಬೋನಸ್ಸನ್ನು ಸಂದಾಯ ಮಾಡಲು ಲೆಕ್ಕಿಸುವಾಗ ಅವರ ಸಂಬಳ/ಮಜೂರಿ ಮಾಸಿಕ ₹7,000/-(ರೂಪಾಯಿ ಏಳು ಸಾವಿರಗಳು ಮಾತ್ರ) ಅಥವಾ ಉದ್ಯೋಗ ಅನುಸೂಚಿತ ಅಡಿಯಲ್ಲಿ ಸರ್ಕಾರದ ಸಕ್ಷಮ ಪ್ರಾಧಿಕಾರವು ನಿಗಧಿಪಡಿಸಿರುವ ಕನಿಷ್ಟ ಮಜೂರಿ ಇದರಲ್ಲಿ ಯಾವುದು ಹೆಚ್ಚಳವೋ ಅದನ್ನು ಪರಿಗಣಿಸತಕ್ಕದ್ದು.

21/08.

3. ಬೋನಸ್/ಅನುಗ್ರಹ ಪೂರ್ವಕಕ್ಕೆ ಅರ್ಹರಾಗಲು ನೌಕರರು 2018-19 ನೇ ಹಣಕಾಸು ವರ್ಷದಲ್ಲಿ 30 ಕೆಲಸದ ದಿನಗಳಿಗೆ ಕಡಿಮೆಯಿಲ್ಲದಂತೆ ಸೇವೆ ಸಲ್ಲಿಸಿರಬೇಕು.

4. ನಿಗಮದ/ಎಸ್ಕಾಂಗಳ ಆವರಣದಲ್ಲಿ ವಂಚನೆ, ಮೋಸ ಅಥವಾ ದೊಂಬಿ, ಗಲಭೆ, ಗೊಂದಲ ಅಥವಾ ಹಿಂಸೆಯ ನಡವಳಿಕೆ ಹಾಗೂ ನಿಗಮದ/ಕಂಪನಿಗಳ ಆಸ್ತಿಯನ್ನು ಕಳವು, ದುರುಪಯೋಗ ಮಾಡಿರುವ ಅಥವಾ ವಿಧ್ವಂಸಕ ಕೃತ್ಯಗಳನ್ನು ನಡೆಸಿರುವ ಆರೋಪದ ಮೇಲೆ ಸೇವೆಯಿಂದ ಪದಚ್ಯುತಿ/ವಜಾಗೊಂಡಿರುವಂತಹ ನೌಕರರು ಬೋನಸ್/ಅನುಗ್ರಹ ಪೂರ್ವಕವನ್ನು ಪಡೆಯಲು ಅನರ್ಹರಾಗಿರುತ್ತಾರೆ.

5. ನಿಗಮ/ಎಸ್ಕಾಂಗಳಲ್ಲಿ ನಿಯೋಜನೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ನೌಕರರಿಗೂ 2018-19ನೇ ಹಣಕಾಸು ವರ್ಷಕ್ಕೆ ಬೋನಸ್/ಅನುಗ್ರಹ ಪೂರ್ವಕವನ್ನು ಸಂದಾಯ ಮಾಡಲು ನಿಗಮವು ಅನುಮೋದಿಸಿದೆ.

6. ಮಾಸಿಕ ₹21,000/- ಮತ್ತು ಅದಕ್ಕಿಂತಲೂ ಹೆಚ್ಚು (ಪೇಮೆಂಟ್ ಆಫ್ ಆ್ಯಕ್ಟ್, 1965 (ಪರಿಷ್ಕೃತ) ರಲ್ಲಿ ವ್ಯಾಖ್ಯಾನಿಸಿರುವಂತೆ) ಸಂಬಳವನ್ನು ಪಡೆಯುತ್ತಿರುವ ನಿಗಮದ ನೌಕರರಿಗೆ ಹಾಗೂ ನಿಗಮ/ಎಸ್ಕಾಂಗಳಲ್ಲಿ ನಿಯೋಜನೆಯ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ನೌಕರರಿಗೆ 2018-19 ನೇ ಹಣಕಾಸು ವರ್ಷದಲ್ಲಿ ಅವರು ಗಳಿಸಿರುವ ಸಂಬಳದ 1/12 ನೇ ಭಾಗದಷ್ಟು (ಶೇ.8.33), ₹7,000/- (ರೂಪಾಯಿ ಏಳು ಸಾವಿರಗಳು ಮಾತ್ರ) ಅನ್ನು ಮೀರದಂತೆ ಅನುಗ್ರಹ ಪೂರ್ವಕ (ಎಕ್ಸ್‌ಗ್ರೇಷಿಯಾ) ರೂಪದಲ್ಲಿ ಸಂದಾಯ ಮಾಡಲು ನಿಗಮವು ಅನುಮೋದಿಸಿದೆ. ಬೋನಸ್ ಪಾವತಿ ಮಾಡಲು ಮೇಲೆ ತಿಳಿಸಿರುವ 2, 3 ಮತ್ತು 4 ರಲ್ಲಿನ ಷರತ್ತುಗಳಿಗೊಳಪಟ್ಟು, ಹಾಗೂ ಅನುಗ್ರಹ ಪೂರ್ವಕ ಸಂದಾಯ ಮಾಡಲು ಲೆಕ್ಕಿಸುವಾಗ ನೌಕರರ ಸಂಬಳವನ್ನು ಮಾಸಿಕ ₹7,000/- ಕ್ಕೆ ಮಿತಿಗೊಳಿಸತಕ್ಕದ್ದು.

7. ನಿಗಮ/ಎಸ್ಕಾಂಗಳಲ್ಲಿ ತರಬೇತಿ ಅವಧಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಿರಿಯ ಮಾರ್ಗದಾಳು/ ಕಿರಿಯ ಸ್ಟೇಷನ್ ಪರಿಚಾರಕ, ಪ್ರೊಬೇಷನರಿ ಮಜ್ದೂರುಗಳು, ಗ್ಯಾಂಗ್‌ಮೆನ್ ಹಾಗೂ ಅರೆಕಾಲಿಕ ಶುಚಿಗಾರರು 2018-19 ನೇ ಹಣಕಾಸು ವರ್ಷದಲ್ಲಿ ಗಳಿಸಿರುವ ಮಜೂರಿ 1/12 ನೇ ಭಾಗದಷ್ಟು(ಶೇ.8.33), ₹7000/- (ರೂಪಾಯಿ ಏಳು ಸಾವಿರ ಮಾತ್ರ) ಅನ್ನು ಮೀರದಂತೆ ಬೋನಸ್ ರೂಪದಲ್ಲಿ ಸಂದಾಯ ಮಾಡಲು ನಿಗಮವು ಅನುಮೋದಿಸಿದೆ.

8. ಮೇಲಿನ ಕಂಡಿಕೆ 3 ಹಾಗೂ 4 ರಲ್ಲಿ ತಿಳಿಸಿರುವ ಷರತ್ತುಗಳಿಗೊಳಪಟ್ಟು, ಬೋನಸ್ ಸಂದಾಯ ಮಾಡಲು ಲೆಕ್ಕಿಸುವಾಗ ಸದರಿಯವರುಗಳ ಮಜೂರಿಯನ್ನು ಮಾಸಿಕ ₹7,000/- ಕ್ಕೆ ಮಿತಿಗೊಳಿಸತಕ್ಕದ್ದು. ಹೊರಗಿನ ಏಜನ್ಸಿ ಮೂಲಕ ನಿಗಮ/ಎಸ್ಕಾಂಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರು ಬೋನಸ್/ ಅನುಗ್ರಹ ಪೂರ್ವಕಕ್ಕೆ ಅರ್ಹರಿರುವುದಿಲ್ಲ.

9. ಬೋನಸ್/ಅನುಗ್ರಹ ಪೂರ್ವಕವನ್ನು ನಗದಾಗಿ ಪಾವತಿಸುವುದು.

ಬೋನಸ್/ ಅನುಗ್ರಹ ಪೂರ್ವಕವನ್ನು ದಿನಾಂಕ: 02.09.2019 ರಂದು ಆಚರಿಸಲ್ಪಡುವ ಗಣೇಶ ಚತುರ್ಥಿ ಹಬ್ಬಕ್ಕೆ ಮುನ್ನ ಬಟವಾಡೆ ಮಾಡತಕ್ಕದ್ದು.

**"ನಿಗಮದ ನಿರ್ದೇಶಕರುಗಳ ಸಭೆಯ ಅನುಸಮರ್ಥನೆಗೆ ಹಾಗೂ ಸರ್ಕಾರದ ಅನುಮೋದನೆಗೆ ಒಳಪಟ್ಟಿರುತ್ತದೆ"**

**ನಿರ್ದೇಶಕರು**
**(ಆಡಳಿತ ಮತ್ತು ಮಾನವ ಸಂಪನ್ಮೂಲ)**

**ಗೆ,**

1. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಜೆಸ್ಕಾಂ/ಹೆಸ್ಕಾಂ/ಮೆಸ್ಕಾಂ/ಸೆಸ್ಕ್/ಪಿ.ಸಿ.ಕೆ.ಎಲ್.
2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂಗಳು.
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂಗಳು.
4. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ಎಸ್ಕಾಂಗಳು.

5. ಹಿರಿಯ ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು(ಹಣಕಾಸು)/ ನಿರ್ದೇಶಕರು(ಪ್ರಸರಣ)/ ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ), ಕವಿಪ್ರನಿನಿ.

www.kptcl.com/eprasarana for information of:

6. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ)/ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.

**ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ:-**

1. ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ (ನೋ.ಸಂ: 659), ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಮತ್ತು ಎಲ್ಲಾ ಎಸ್ಕಾಂಗಳು.
2. ಅಧ್ಯಕ್ಷರು, ಕವಿಮಂ ಇಂಜನಿಯರ್‌ಗಳ ಸಂಘ, ಬೆಂಗಳೂರ ಮತ್ತು ನಿರ್ದೇಶಕರು, ಕವಿಪ್ರನಿನಿ ಮತ್ತು ಎಲ್ಲಾ ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ (ನೋ.ಸಂ: 659), ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜನಿಯರ್‌ಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ, ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೋಮಾ ಇಂಜನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಧಿಕಾರಿಗಳ ಸಂಘ, ಬೆಂಗಳೂರು.
9. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಪಿಂಚಣಿದಾರರ ಸಂಘ, ಬೆಂಗಳೂರು.